

# ಶ್ರೀರಾಮಕೃಷ್ಣ ಮಹಿಮಾ

**ಮೂಲ ಬಂಗಾಳಿ : ಅಕ್ಷಯಕುಮಾರ್ ಸೇನ್**

ಜೈ ಗುರುದೇವ

## ಅಧ್ಯಾಯ ೪ – ರಘುವೀರನ ಮಾಲೆ

೩೭೪. ಬರಿಯ ಭ್ರಮೆಯೊ ಕನಸೊ ತಿಳಿಯೆನಿನ್ನೊಮ್ಮೆ।
ಪರಿಕಿಸುವೆನೆನುತ ನಿದ್ರಿಸಲು ಮತ್ತೊಮ್ಮೆ॥

೩೭೫. ಈ ಬಾರಿಯೂ ಕನಸು ಕಂಡುದಾತನಿಗೆ।
ಆ ಹುಡುಗನೆಂದ ಭತ್ತದ ಬೆಳೆಯ ನಡುವೆ॥

೩೭೬. ಸಸಿಗಳಡಿಯಲಿ ಕಾಣಿಸುವೆನು ತಾನೆಂದ ।
ಹೊಸಹುರುಪಿನಿಂ ಬುಧನು ನಿದ್ದೆತಿಳಿದೆದ್ದ॥

೩೭೭. ಗದ್ದೆಯೆಡೆಗೈದಿ ಕಂಡನು ಶಿಲೆಯನೊಂದ।
ಕನಸಿನಲಿ ಕಂಡ ಸಸಿಗಳ ಬಳಿಗೆ ಪೋದ॥

೩೭೮. ಶುದ್ಧಸಾಲಿಗ್ರಾಮ ಶೋಭಿಸುತಲಿತ್ತು।
ನಾಗರವು ಹೆಡೆಯಾಡಿಸುತ್ತ ಅಲ್ಲಿತ್ತು॥

೩೭೯. ಕನಸನೇ ನೆನೆನೆನದು ಸದ್ಧೈರ್ಯದಿಂದ।
ಸಾಗಿ ಸಾಲಿಗ್ರಾಮ ಶಿಲೆಯನಿವ ಪಿಡಿದ॥

೩೮೦. ಮಾಯವಾಯಿತು ಹಾವು
ಮನದಿ ಮುದಗೊಂಡು।
ಮನೆಯೆಡೆಗೆ ಬಂದು ಪೀಠದೊಳದನು ಇಡಲು॥

೩೮೧. ಪ್ರತಿನಿತ್ಯ ಪೂಜೆ ಸಲ್ಲಿಸುತ ಶ್ರದ್ಧೆಯೊಳು।
ಮುಷ್ಟಿಯಕ್ಕಿಯ ನಿವೇದಿಸುತಿರ್ದ ತಿಳಿದು॥

೩೮೨. ಅದರಿಂದ ರಘುವೀರ ಶಿಲೆಯವನ ಹೃದಯ।
ಅದನರ್ಚಿಸುವದವನ ಮನಕೆ ಬಲು ಮೋದ ॥

೩೮೩. ಹೂಗಂಧ ಮಾಲೆಯ ಅಲಂಕಾರಗೈದು।
ಪೂಜಿಸಲು ಬೇಕೆಂದು ನಿರ್ಧರಿಸುತಂದು॥

೩೮೪. ಖುಷಿಯಿಂದ ಹೂವಿನೆಸಳಿಗೆ ಗಂಧ ಪೂಸಿ।
ಹಸನಾಗಿ ಹೂಮಾಲೆಗೈದ ಬಲುಶ್ರಮಿಸಿ॥

೩೮೫.ಆ ಮಾಲೆಯನು ನೋಡುತಾ ಗದಾಧರನು।
ಅದರಿಂದ ಸಿಂಗರಿಸಿಕೊಳಲ್ಬಯಸಿದನು॥

೩೮೬.ಈ ಮಹತ್ವಾಕಾಂಕ್ಷೆ ನೆರವೇರ್ವುದೆಂತು।
ಆ ಮಹಾ ಕೌತುಕವ ವರ್ಣಿಸುವೆನಿಂತು॥

೩೮೭.ಬ್ರಹ್ಮ ವಿಷ್ಣು ಮಹೇಶ್ವರರನು ಮೀರಿಸಿದ।
ದಿವ್ಯತಂತ್ರಜ್ಞನೀತನು ಪುಟ್ಟ ಪೋರ॥

೩೮೮.ತನ್ನಿಚ್ಛೆ ಪೂರೈಸಿಕೊಂಡ ಆ ಬಗೆಯ।
ವರ್ಣಿಸುವೆ ಘಟಿಸಿದಾ ನೈಜಸಂಗತಿಯ॥

೩೮೯.ತಂದೆ ಪೂಜಾಪರಿಕರಗಳ ಸಂಗ್ರಹಿಸಿ।
ಚಂದದಿಂದಣಿಯಾಗುತಿರುವುದನು ಗ್ರಹಿಸಿ॥

೩೯೦.ಬಹುಭಕ್ತಿಯಿಂದ ಸಾಲಿಗ್ರಾಮಶಿಲೆಗೆ।
ಅಭಿಷೇಕವೆಸಗಿದನು ಸ್ಮರಿಸಿ ಮನದೊಳಗೆ॥

೩೯೧.ಗಂಧಪುಷ್ಪಗಳನರ್ಪಿಸುವ ಪೂರ್ವದಲಿ।
ಬಂದುದವನಿಗೆ ನಾಮಜಪದೊಳಾಸಕ್ತಿ॥

೩೯೨.ಕಣ್ಮುಚ್ಚಿ ಜಪಿಸುತಿರಲೇಕಾಗ್ರ ಮನದಿ।
ತನ್ನನೇ ಮರೆತನವ ಧ್ಯಾನಯೋಗದಲಿ॥

೩೯೩.ಇದನೆ ಹಾರೈಸಿ ಕುಳಿತಿರ್ದನು ಗದಾಯಿ।
ಮುದದಿಂದ ಪೂಜೆಗೈಯ್ಯುವ ಸ್ಥಳಕೆ ಸಾಗಿ॥

೩೯೪.ಆಸಕ್ತಿಯೊಳು ತಂದೆಗೈದ ಮಾಲೆಯನು।
ತಾನೆ ಕೊರಳಲಿ ಧರಿಸಿ ಶೋಭಿಸಿದನವನು॥

೩೯೫.ಗಂಧವೆಲ್ಲವನು ಲೇಪಿಸಿಕೊಂಡ ಮೈಗೆ।
ಚಂದವಾಯಿತು ಎನುತ ಹಿಗ್ಗಿ ಮನದೊಳಗೆ॥

ಕನ್ನಡ ಕಾವ್ಯಾನುವಾದ: ಮಂಜುನಾಥ ಭಾಗವತ ಹೊಸ್ತೋಟ, ಸಹಾಯ: ಕೃಷ್ಣ ಹೆಗಡೆ ಮತ್ತು ರಾಮಕೃಷ್ಣ ಹೆಗಡೆ, ಭೈರುಂಬೆ